ಕರ್ನಾಟಕ ಸರ್ಕಾರ

# ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ,

ಜಿಲ್ಲಾಡಳಿತ ಭವನ, ಚಿಕ್ಕಬಳ್ಳಾಪುರ-562101

Email id: dhochikballapur@gmail.com Ph.No: 08156-277034

ಸಂಖ್ಯೆ: ಜಿಆಕುಕ/ಚಿಪುರ/ಕೋವಿಡ್-19/ಟೆಂಡರ್/05/2020-21 ದಿನಾಂಕ: 10.08.2020

## -:ಪ್ರಕಟಣೆ:-

ವಿಷಯ: ಕೋವಿಡ್-19 ಹಿನ್ನಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿ ಇರುವ ಶುಶ್ರೂಷಕರು, ಲ್ಯಾಬ್ ಟೆಕ್ನಿಷಿಯನ್, ಫಾರ್ಮಾಸಿಸ್ಟ್ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಆದೇಶ ಸಂಖ್ಯೆ: ಆಕುಕ 01 ಸಿ&ಆರ್ 2020 ಬೆಂಗಳೂರು, ದಿನಾಂಕ: 14.07.2020.

***&***

ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯದ್ಯಂತ ಕೊರೋನಾ ವೈರಸ್ ಪ್ರಕರಣಗಳು ದಿನೇ ದಿನೇ ಹೆಚ್ಚಾಗುತ್ತಿರುವ ಹಿನ್ನಲೆಯಲ್ಲಿ ಕೊರೋನಾ ವೈರಸ್ ಪ್ರಕರಣಗಳನ್ನು ಸಮರ್ಪಕವಾಗಿ ನಿಭಾಯಿಸಲು ಅರೆ ವೈದ್ಯಕೀಯ ಸಿಬ್ಬಂದಿಗಳ ಪಾತ್ರ ಮಹತ್ವದ್ದಾಗಿದ್ದು, ಆದರೆ ಪ್ರಸ್ತುತ ಇಲಾಖೆಯಲ್ಲಿ ಶುಶ್ರೂಷಕರು-1419, ಲ್ಯಾಬ್ ಟೆಕ್ನಿಷಿಯನ್-506, ಫಾರ್ಮಾಸಿಸ್ಟ್-916 ಹುದ್ದೆಗಳು ಖಾಲಿ ಇದ್ದು, ಪ್ರಸ್ತುತ ಈ ಜಿಲ್ಲೆಯಲ್ಲಿ ಕೆಳಕಾಣಿಸಿರುವ ಹುದ್ದೆಗಳನ್ನು 6 ತಿಂಗಳ ಮಟ್ಟಿಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಈ ಕಛೇರಿಯಿಂದಲೇ ನೇರ ಸಂದರ್ಶನ ನಡೆಸಿ ದಾಖಲೆಗಳನ್ನು ಪರಿಶೀಲಿಸಿ ಮಾನ್ಯ ಜಿಲ್ಲಾಧಿಕಾರಿಗಳ ಸಹಮತದೊಂದಿಗೆ ನೇಮಿಸಿಕೊಳ್ಳಲು ಸೂಚಿಸಲಾಗಿರುವ ಮೇರೆಗೆ ರೋಸ್ಟರ್ ಕಂ ಮೆರಿಟ್ ಆಧಾರದಲ್ಲಿ 6 ತಿಂಗಳ ಅವಧಿಗೆ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದೆ. (www.chikkaballapur.nic.in) ರಲ್ಲಿ ದಿನಾಂಕ: 17.08.2020 ರಂದು ಸಂಜೆ 5.00 ಗಂಟೆ ಒಳಗೆ ಅರ್ಜಿಗಳನ್ನು ಸಲ್ಲಿಸುವಂತೆ ಸೂಚಿಸಿದೆ ಹಾಗೂ ಮಾನ್ಯ ಜಿಲ್ಲಾಧಿಕಾರಿಗಳ ಸಮಕ್ಷದಲ್ಲಿ ದಿನಾಂಕ: 18.08.2020 ರಂದು ಬೆಳಗ್ಗೆ 11:00 ಗಂಟೆಗೆ ಎಲ್ಲಾ ಅರ್ಜಿದಾರರು ಮೂಲ ದಾಖಲೆಗಳೊಂದಿಗೆ ಪರಿಶೀಲನೆಗಾಗಿ ಈ ಕಛೇರಿಗೆ ಹಾಜರಾಗತಕ್ಕದ್ದು.

| ಕ್ರ.ಸಂ | ಹುದ್ದೆಯ ವಿವರ | ಮಾಸಿಕ ವೇತನ | ನೇಮಕ ಮಾಡಿಕೊಳ್ಳಬೇಕಾದ ಸಂಖ್ಯೆ |
|---|---|---|---|
| 1 | ಶುಶ್ರೂಷಕರು | ರೂ. 25000/- | 103 |
| 2 | ಪ್ರಯೋಗ ಶಾಲಾ ತಂತ್ರಜ್ಞರು | ರೂ. 20000/- | 1 |
| 3 | ಫಾರ್ಮಾಸಿಸ್ಟ್ | ರೂ. 20000/- | 1 |

ಷರತ್ತುಗಳು:-

1. ಸದರಿ ಹುದ್ದೆಯ ನೇಮಕಾತಿಯು ತಾತ್ಕಾಲಿಕವಾಗಿ ಕರೋನ ಪ್ರಯುಕ್ತ 6 ತಿಂಗಳ ಮಟ್ಟಿಗೆ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗುವುದು.

ಹುದ್ದೆಯ ವಿವರ:-

1. ಶುಶ್ರೂಷಕರು:- ಬಿಎಸ್‌ಸಿ ನರ್ಸಿಂಗ್/ಜಿಎನ್‌ಎಂ ತರಬೇತಿಯಲ್ಲಿ ತೇರ್ಗಡೆ/ಪದವಿ ಹೊಂದಿರಬೇಕು KNC (ಕರ್ನಾಟಕ ನರ್ಸಿಂಗ್ ಕೌನ್ಸಿಲ್) ನಲ್ಲಿ ನೋಂದಣಿ ಆಗಿರಬೇಕು. ವಯಸ್ಸು ಕನಿಷ್ಠ 18 ವರ್ಷ ಗರಿಷ್ಠ 40 ವರ್ಷ ಮೀರಿರಬಾರದು. ಗಣಕ ಯಂತ್ರ ತರಬೇತಿ ಪೂರೈಸಿರಬೇಕು
2. ಪ್ರಯೋಗ ಶಾಲಾ ತಂತ್ರಜ್ಞರು:- ಡಿ.ಎಂ.ಎಲ್.ಟಿ. ಪರೀಕ್ಷೆಯಲ್ಲಿ ತೇರ್ಗಡೆ/ಪದವಿ ಹೊಂದಿರಬೇಕು. ವಯಸ್ಸು ಕನಿಷ್ಠ 18 ವರ್ಷ ಗರಿಷ್ಠ 40 ವರ್ಷ ಮೀರಿರಬಾರದು. ಗಣಕ ಯಂತ್ರ ತರಬೇತಿ ಪೂರೈಸಿರಬೇಕು
3. ಫಾರ್ಮಾಸಿಸ್ಟ್:- ಡಿಪ್ಲೋಮಾ ಇನ್ ಫಾರ್ಮಾಸಿಯಲ್ಲಿ ತೇರ್ಗಡೆ/ಪದವಿ ಹೊಂದಿರಬೇಕು, KPC (ಕರ್ನಾಟಕ ಫಾರ್ಮಾಸಿ ಕೌನ್ಸಿಲ್) ನಲ್ಲಿ ನೋಂದಣಿ ಆಗಿರಬೇಕು. ವಯಸ್ಸು ಕನಿಷ್ಠ 18 ವರ್ಷ ಗರಿಷ್ಠ 40 ವರ್ಷ ಮೀರಿರಬಾರದು. ಗಣಕ ಯಂತ್ರ ತರಬೇತಿ ಪೂರೈಸಿರಬೇಕು

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ

ಪ್ರತಿಯನ್ನು:

1. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಚಿಕ್ಕಬಳ್ಳಾಪುರ ರವರಿಗೆ ಸಲ್ಲಿಸುತ್ತಾ ಸದರಿ ಪ್ರಕಟಣೆಯನ್ನು ಸಾಧ್ಯವಾದಷ್ಟು ಕಡಿಮೆ ಅಳತೆಯಲ್ಲಿ ಪ್ರಚುರ ಪಡಿಸಲು ತಿಳಿಸಿದೆ.